ಶ್ರೀ ವೇದಾಂತ ಹೆವಿಮ್ಮಿಗೆ.—ಸ್ವಯಂ ಉದ್ಯೋಗಕ್ಕೆ ಅರ್ಜಿ ಹಾಕಬೇಕಾದರೆ ಯಾರು ಐ. ಟಿ. ಐ. ಇಂತಾದ್ದರಲ್ಲಿ ಪಾಸ್ ಮಾಡಿರುತ್ತಾರೆ. ಅಂತಹವರು ಇದರಲ್ಲಿ ಅರ್ಜಿ ಹಾಕುತ್ತಾರೆ. ಮೈಸೂರು ನಗರದ ಎರಡು ಮೂರು ಶಾಸನ ಸಭಾ ಕ್ಷೇತ್ರಗಳಲ್ಲಿ ವಿತರಣೆ ಮಾಡುವಾಗ, ನಿಮ್ಮ ಅಧಿಕಾರಿಗಳು ಯಾರು ಇದ್ದಾರೆ, ಅವರ ಅಭಿಪ್ರಾಯವನ್ನು ಕೇಳತಕ್ಕೆ ವ್ಯವಸ್ಥೆ ಏನಾದರೂ ಮಾಡಿದ್ದೀರಾ ? ಅಥವಾ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈಗ ಇರುವ ವ್ಯವಸ್ಥೆ ಅದೇ ತರಹ ಇದೆ.

ಶ್ರೀ ವೇದಾಂತ ಹೆವಿಮ್ಮಿಗೆ.—ಅಧ್ಯಕ್ಷರೆ ..

ಅಧ್ಯಕ್ಷರು.—ಸಪ್ಲಿಮೆಂಟರಿ ಎರಡಕ್ಕಿಂತಲೂ ಹೆಚ್ಚಿಗೆ ಯಾರಿಗೂ ಕೊಡುವುದಿಲ್ಲ.

ಶ್ರೀ ವೇದಾಂತ ಹೆವಿಮ್ಮಿಗೆ.—ಅಧ್ಯಕ್ಷರೇ ಇದು ಬಹಳ ಮುಖ್ಯ ಪ್ರಶ್ನೆ ಇದೆ...

ಅಧ್ಯಕ್ಷರು.—ನಾನು ನಿಮಗೆ ಮೂರು ಸಾರಿ ಕೇಳಲಿಕ್ಕೆ ಅವಕಾಶ ಕೊಟ್ಟರೆ, ಮತ್ತೊಬ್ಬ ಸದಸ್ಯರಿಗೂ ಅವಕಾಶ ಕೊಡಬೇಕಾಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆವಿಮ್ಮಿಗೆ.—ಇದು ಒಂದು ಕಡೇ ಪ್ರಶ್ನೆ ಕೇಳುತ್ತೇನೆ.....

ಅಧ್ಯಕ್ಷರು.—ಇವೊತ್ತು ಡಿಮ್ಯಾಂಡ್ ಮೇಲೆ ಚರ್ಚೆ ಇದೆ. ೧೨ ಗಂಟೆಗೆ ಸರಿಯಾಗಿ ಇದು ಮುಗಿಯಬೇಕು. ಸಪ್ಲಿಮೆಂಟರಿ ಎರಡಕ್ಕಿಂತಲೂ ಹೆಚ್ಚಿಗೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ತಮಗೆ ಮೂರನೇ ಸಾರಿ ಕೇಳಲಿಕ್ಕೆ ಅವಕಾಶ ಕೊಟ್ಟರೆ, ಅನಂತರ ಈ ಕಡೆಯವರು ಕೇಳುತ್ತಾರೆ. ಆದ್ದರಿಂದ ದಯಮಾಡಿ ಕುಳಿತುಕೊಳ್ಳಬೇಕು.

ಸಿಮೆಂಟ್ ಕಾರ್ಖಾನೆಯಂ ಹೊಗೆ ಹಾಗೂ ಧೂಳಿನಿಂದಾಗುವ ಅಪಾಯ

೯೯. ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗಾ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಾಡಿ ಶಹಾಬಾದ್, ಚಿತ್ತಾಪುರ ಮತ್ತು ಸೇಡಂಗಳಲ್ಲಿ ದೊಡ್ಡ ಮತ್ತು ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳು ಇರುವುವು. ಅವುಗಳ ಧೂಳಿನಿಂದ ಮತ್ತು ಹೊಗೆಯಿಂದ ಜನರ ಆರೋಗ್ಯ ಕೆಡುತ್ತಿದ್ದು ಮತ್ತು ಬೆಳೆಗಳು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಅದರ ನಿಯಂತ್ರಣಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ಬಂದಿದೆ.

(ಆ) ಎ. ಸಿ. ಸಿ. ಸಿಮೆಂಟ್ ಕಾರ್ಖಾನೆ ಶಹಾಬಾದ್ ಮತ್ತು ಕರ್ನಾಟಕ ಸಿಮೆಂಟ್ಸ್ ಲಿ. ಚಿತ್ತಾಪುರ ಈ ಕಾರ್ಖಾನೆಗಳು ವಾಯು ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯಿದೆ ೧೯೮೧ರ ಅಡಿಯಲ್ಲಿ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸದೇ ಇದ್ದುದರಿಂದ ಈ ಕಾರ್ಖಾನೆಗಳ ವಿರುದ್ಧ ಚಿತ್ತಾಪುರ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ.

೨. ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ (ಕುರ್ಕುಂಟಾ) ಕಾರ್ಖಾನೆಗೆ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ೩೧-೧೨-೧೯೮೭ರವರೆಗೆ ಕಾಲಾವಕಾಶ ನೀಡಲಾಗಿದೆ.

೩. ವಾಡಿಯಲ್ಲಿರುವ ಎ. ಸಿ. ಸಿ. ಸಿಮೆಂಟ್ ಕಾರ್ಖಾನೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದ ಪ್ರಕಾರ ಒಂದು ದೊಡ್ಡ ಆವಿಗೆಗೆ (ಕಿಲ್ನ್) ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದೆ. ಅದರ ಕಾರ್ಯವು ಸಮರ್ಪಕವಾಗಿದೆ. ಇನ್ನುಳಿದ ಎರಡು ಚಿಕ್ಕ ಆವಿಗೆಗಳಿಗೆ (ಕಿಲ್ನ್) ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಳ. ಸೇಡಂ ಮತ್ತು ಮಳಖೇಡ ಬಳಿ ಹೊಸದಾಗಿ ನಿರ್ಮಿಸಿರುವ ವಾಸವದತ್ತ ಮತ್ತು ರಾಜಶ್ರೀ ಸಿಮೆಂಟ್ ಕಾರ್ಖಾನೆಗಳು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದ್ದು ಅವುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ.

೫. ಸೌತ್ ಇಂಡಿಯ ಸಿಮೆಂಟ್ ಕಾರ್ಖಾನೆಯು ಇನ್ನೂ ನಿರ್ಮಾಣ ಹಂತದಲ್ಲಿದ್ದು ಉತ್ಪಾದನೆಯನ್ನು ಪ್ರಾರಂಭಿಸುವ ಮೊದಲು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸುವಂತೆ ಆದೇಶ ನೀಡಲಾಗಿದೆ.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ ಎಂದರೆ, ಹೋದ ತಿಂಗಳಿ ಚಿತಾಪುರದಲ್ಲಿ ವಾಯುಮಾಲಿನ್ಯ ನಿಯಂತ್ರಣವನ್ನು ಮಾಡದೇ ಇರತಕ್ಕ ಒಂದು ಫ್ಯಾಕ್ಟರಿ ಏನಿದೆ ಅದನ್ನು ಬಂದ್ ಮಾಡಬೇಕೆಂದು ಇಡೀ ಪಟ್ಟಣದ ಜನರು ಬಂದ್‌ನ್ನು ಆಚರಿಸಿದರು. ನನಗೆ ತಿಳಿದ ಮಟ್ಟಿಗೆ ಆ ಫ್ಯಾಕ್ಟರಿಯನ್ನೇ ಬಂದ್ ಮಾಡಬೇಕೆಂದು ಆ ಜನರು ಕೇಳುತ್ತಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಈ ಪ್ರಶ್ನೆ ಕೇಳಿದ್ದು. ನನಗೆ ತಿಳಿದುಬಂದಿರುವಂತೆ ಆ ಫ್ಯಾಕ್ಟರಿಯವರು ವಾಯು ಮಾಲಿನ್ಯ ಯಂತ್ರವನ್ನು ಕೂಡಿಸಿದ್ದಾರೆ. ಆದರೆ ಅದು ಸರಿಯಾಗಿ ಕೆಲಸಮಾಡುತ್ತಿಲ್ಲ...

ಅಧ್ಯಕ್ಷರು.—ನಿಮಗೆ ಏನು ಉತ್ತರಬೇಕೆಂದು ಹೇಳಿ. ನೇರವಾದ ಪ್ರಶ್ನೆಯನ್ನು ಮಂತ್ರಿಗಳಿಗೆ ಹಾಕಿ ಅವರಿಂದ ಉತ್ತರ ಪಡೆದುಕೊಳ್ಳಿ. ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಕೆ. ಕಾಂತ.—ನಾನು ಹೇಳಿದ್ದು ಮಾನ್ಯ ಮಂತ್ರಿಗಳಿಗೆ ಗೊತ್ತಾಗಿಲ್ಲ. ಆದ್ದರಿಂದ ಎವರವಾಗಿ ಹೇಳುತ್ತಿದ್ದೇನೆ. ಹಾಗೆ ಹೇಳದಿದ್ದರೆ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನೀವು ಹೇಳಂವುದನ್ನು ಅರ್ಥ ಮಾಡಿಕೊಳ್ಳದಷ್ಟು ಮಂತ್ರಿಗಳು ದಡ್ಡರೇನೂ ಅಲ್ಲ. ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್. ಕೆ. ಕಾಂತ.—ಅಧಿಕಾರಿಗಳು ಕೊಟ್ಟಿರತಕ್ಕ ಉತ್ತರವನ್ನೇ ಮಾನ್ಯ ಮಂತ್ರಿಗಳು ಇಲ್ಲಿ ಹೇಳುತ್ತಿದ್ದಾರೆ...

ಅಧ್ಯಕ್ಷರು.—ನೀವು ನನಗೆ ಹೇಳಿಕೊಡುವುದಕ್ಕೆ ಬರಬೇಡಿ. ಪ್ರಶ್ನೆ ಕೇಳುವುದರಲ್ಲಿ ನನಗೂ ಅನುಭವ ಇದೆ.

ಶ್ರೀ ಎಸ್. ಕೆ. ಕಾಂತ.—ಸ್ವಾಮಿ, ಆ ಫ್ಯಾಕ್ಟರಿಯು ವಾಯು ಮಾಲಿನ್ಯ ನಿಯಂತ್ರಣ ಯಂತ್ರ ಸರಿಯಾಗಿ ಕೆಲಸಮಾಡದೇ ಇರುವುದರಿಂದ, ಅವರು ಹಗಲು ಹೊತ್ತು ಫ್ಯಾಕ್ಟರಿ ಬಂದ್ ಮಾಡಿ ರಾತ್ರಿ ಹೊತ್ತು ಚಾಲೂ ಮಾಡುತ್ತಾರೆ ಇದರಿಂದಾಗಿ ಹೊಗೆ ಹಳ್ಳಿಯಲ್ಲೆಲ್ಲಾ ತುಂಬಿಕೊಂಡು ಜನರ ಆರೋಗ್ಯ ಮತ್ತು ಸುತ್ತಮುತ್ತಲಿನ ಬೆಳೆಯೆಲ್ಲಾ ಹಾಳಾಗುತ್ತಿದೆ. ಇದನ್ನು ತಪ್ಪಿಸಲು ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕಳವಳವನ್ನು ವ್ಯಕ್ತಪಡಿಸುತ್ತಿದ್ದಾರೆಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಎಲ್ಲೇ ಆಗಲಿ ಜಲಮಾಲಿನ್ಯ ಅಥವಾ ವಾಯು ಮಾಲಿನ್ಯ ಅಥವಾ ಬೇರೆ ಇನ್ನಾವುದೇ ಮಾಲಿನ್ಯವಾಗಬಾರದೆಂಬುದು ಸರ್ಕಾರದ ನೀತಿಯಾಗಿದೆ. ಅದಕ್ಕಾಗಿ ನಾವು ಕೆಲವು ವಿಧಿನಿಷೇಧಗಳನ್ನು ಸಂಬಂಧಪಟ್ಟವರಮೇಲೆ ಹಾಕುತ್ತೇವೆ. ನಾವು ಈಗಾಗಲೇ ಆ ಕಾರ್ಖಾನೆಯನ್ನು ನಿಲ್ಲಿಸಿದ್ದೇವೆ, ಮುಂದೆ ಅವರು ವಾಯು ಮಾಲಿನ್ಯನಿಯಂತ್ರಣ ಯಂತ್ರವನ್ನು ಅಳವಡಿಸಿಕೊಳ್ಳದೇ ಇದ್ದರೆ, ಫ್ಯಾಕ್ಟರಿಯನ್ನು ತೆಗೆಯುವುದಕ್ಕೇ ಅವಕಾಶವನ್ನು ಕೊಡುವುದಿಲ್ಲವೆಂದು ತಿಳಿಸಿದ್ದೇವೆ. ರಾತ್ರಿ ಹೊತ್ತಾಗಲಿ, ಹಗಲು ಹೊತ್ತಾಗಲಿ ಹೊಗೆಯನ್ನು ಬಿಟ್ಟು ವಾಯು ಮಾಲಿನ್ಯ ಮಾಡುವುದಕ್ಕೆ ನಾವು ಯಾರಿಗೂ ಅವಕಾಶವನ್ನು ಕೊಡುವುದಿಲ್ಲ. ಒಂದುವೇಳೆ ಅಂಥಹ ನಿದರ್ಶನಗಳು ಎಲ್ಲಾದರೂ ಕಂಡುಬಂದಾಗ ಅದನ್ನು ನಮ್ಮ ಗಮನಕ್ಕೆ ತಂದರೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ. ಆದರೆ ಎಲ್ಲಾದರೂ ಇಂಥ ದೂರುಗಳು ಬಂದ್‌ಕೂಡಲೇ ನಾನೇ ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರುವುದಕ್ಕಾಗುವುದಿಲ್ಲ. ನಮ್ಮ ಅಧಿಕಾರಿಗಳನ್ನು ಅಂಥ ಸಂದರ್ಭದಲ್ಲಿ ಕಳುಹಿಸಬೇಕಾಗುತ್ತದೆ.

ಶ್ರೀ ಎಸ್.ಕೆ. ಕಾಂತ.—ಎ.ಸಿ.ಸಿ. ಸಿಮೆಂಟ್ ಫ್ಯಾಕ್ಟರಿ ತುಂಬಾ ಹಳೆಯ ಫ್ಯಾಕ್ಟರಿ. ಇದು ನಮ್ಮ ಶಹನಾದ್‌ನಲ್ಲಿದೆ. ಇದರಿಂದ ಉಂಟಾಗಬಹುದಾದ ವಾಯು ಮಾಲಿನ್ಯವನ್ನು ನಿಯಂತ್ರ

ಮಾಡಬೇಕೆಂದು ನಾವು ಹೇಳಿದ್ದೇವೆ. ಇದಕ್ಕೆ ತಾವು ಒಂದು ಕಾಲ ಮಿತಿಯನ್ನು ಏನಾದರೂ ಕೊಟ್ಟಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—ಸಾಮಾನ್ಯವಾಗಿ ವಾಯು ಮಾಲಿನ್ಯ ನಿಯಂತ್ರಣ ಯಂತ್ರದ ಸಾವಧಾನಂಗಳು ನಮ್ಮದೇಶದಲ್ಲೇ ಸಿಕ್ಕುವುದಾದರೆ ಅದನ್ನು ತರಿಸಿ ಅಳವಡಿಸಲು ೩ ತಿಂಗಳ ಕಾಲ ಮಿತಿಯನ್ನು ಕೊಟ್ಟಿರುತ್ತೇವೆ. ಒಂದುವೇಳೆ ನಮ್ಮ ರಾಜ್ಯವನ್ನು ಬಿಟ್ಟು ಹೊರಗಿನಿಂದ ಆ ಸಾಮಾನುಗಳನ್ನು ತರಿಸಬೇಕಾದರೆ ಅದಕ್ಕೆ ತಕ್ಕಂತೆ ಕಾಲ ಮಿತಿಯನ್ನು ಕೊಟ್ಟಿರುತ್ತೇವೆ. ಒಟ್ಟಿನಲ್ಲಿ ಕಾಲಮಿತಿಯನ್ನಂತೂ ಹಾಕಿರುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಜಲ ಮಾಲಿನ್ಯದ ಬಗ್ಗೆ ಯಾರು ಕಾರಣವಾಗಿರುತ್ತಾರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇಂಡಸ್ಟ್ರಿಗಳನ್ನು ತೆರೆಯಲು ನೀವು ಮಾಡಿರತಕ್ಕ ರೂಲ್ಸ್ ಏನಿದೆ ಅದರಲ್ಲಿ ಬಹಳಷ್ಟು ನಮಗೇ ವಿರುದ್ಧವಾಗಿವೆ. ನಾವು ಅವರಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಅವರು ಕೂಡಲೇ ಕೋರ್ಟಿಗೆ ಹೋಗುತ್ತಾರೆ. ಇದಕ್ಕೆ ಬದಲಾಗಿ ಇಂಡಸ್ಟ್ರೀಸ್‌ನವರಿಗೆ ಲೈಸೆನ್ಸ್ ಕೊಡುವುದನ್ನೇ ಬಿಟ್ಟರೆ ಸುಮ್ಮನಿರುತ್ತಾರೆ. ಮೂಗು ಹಿಡಿದರೆ ಬಾಯನ್ನು ತಾನೇತಾನಾಗಿ ಬಿಡುತ್ತಾರೆ ಅನ್ನುವಂತೆ ರೂಲ್ಸ್‌ನಲ್ಲಿ ನೀವು ಬಿಗಿಯಾಗಿದ್ದರೆ ನೀವು ಹೇಳಿದಂತೆ ಅವರು ಕೇಳುತ್ತಾರೆ. ಇಲ್ಲದಿದ್ದರೆ ನೀವು ಲೈಸೆನ್ಸ್ ಕೊಟ್ಟಮೇಲೆ ಮತ್ತೆ ಅವರನ್ನು ನಿಲ್ಲಿಸುವುದಕ್ಕೆ ಬಹಳ ಕಷ್ಟ. ರೂಲ್ಸ್‌ನ್ನು ತಿದ್ದುಪಡಿ ತರುವುದರ ಮೂಲಕ ಬಿಗಿ ಮಾಡಿ ಎಂದೂ ನಾನು ಅನೇಕಸಾರಿ ಹೇಳಿದ್ದೇವೆ. ಆದರೆ ತಾವು ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಅನೇಕಸಾರಿ ಹೇಳಿದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಇದು ಮೊದಲನೇಸಾರಿ ಅವರು ಇಲ್ಲಿ ಹೇಳುತ್ತಿರುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ೨–೩ ಕಾಗದಗಳನ್ನು ನಿಮಗೆ ಬರೆದಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕಿಯವರು ಯಾವ ಫ್ಯಾಕ್ಟರಿಯನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಕಾರವಾರದಲ್ಲಿರತಕ್ಕ ಕಂಪೆನಿಗೆ ನಾವು ಪೋಲಿಸ್ ಕಾವಲನ್ನು ಹಾಕಿ ಅದನ್ನು ಬಂದ್ ಮಾಡಿಸಿದ್ದೇವೆ ಅದಕ್ಕೆ ಬೇಕಾದ ಎಕ್ವಿಪ್‌ಮೆಂಟ್‌ನ್ನು ತಂದಮೇಲೆ ಅದನ್ನು ಅಳವಡಿಸಿ ನಂತರ ಕಾರ್ಖಾನೆಯನ್ನು ಚಾಲೂ ಮಾಡಬೇಕೆಂದು ತಿಳಿಸಿದ್ದೇವೆ. ವಾಯು ಮಾಲಿನ್ಯ ಅಥವಾ ಜಲ ಮಾಲಿನ್ಯ ಮಾಡತಕ್ಕ ಯಾವುದೇ ಕಾರ್ಖಾನೆಗಳಾಗಲಿ ಮಾನ್ಯ ಸದಸ್ಯರ ಗಮನಕ್ಕೆ ಬಂದಕೂಡಲೇ ಅದನ್ನು ನನ್ನ ಗಮನಕ್ಕೆ ತಂದರೆ ಕೂಡಲೇ ಅದರ ವಿರುದ್ಧ ತೀವ್ರ ಕ್ರಮತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಉಚ್ಚಂಗಿದುರ್ಗ ಗ್ರಾಮಕ್ಕೆ ಪಶು ಚಿಕಿತ್ಸಾಲಯ

೮೬೭(ಡಿ) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ರೇಷ್ಮೆ, ವ್ಯವಸಾಯ, ಪಶುಸಂಗೋಪನಾ ಹಾಗೂ ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮವು ದೊಡ್ಡ ಗ್ರಾಮವಾಗಿದ್ದು ಸುತ್ತಮುತ್ತಲಿನ ೨೦–೨೫ ಹಳ್ಳಿಗಳಿಗೆ ಕೇಂದ್ರವಾಗಿರುವುದು ನಿಜವಲ್ಲವೆ.

ಆ) ಈ ಭಾಗದ ರೈತರಿಗೆ, ದನಕರುಗಳಿಗೆ ಚಿಕಿತ್ಸೆಗೆ ಯಾವುದೇ ಸರಕಾರಿ ಪಶು ಚಿಕಿತ್ಸಾಲಯ ಇಲ್ಲದಿರುವುದು ನಿಜವಲ್ಲವೆ.

ಇ) ಚಿಕಿತ್ಸೆಗಾಗಿ ಗ್ರಾಮಸ್ಥರು ೧೮–೨೦ ಕಿ.ಮೀ. ದೂರ ಕ್ರಮಿಸಬೇಕಾಗಿರುವುದು ನಿಜವಲ್ಲವೆ, ಅಸಂನೀಗಿದ್ದು ಸರಿಯೇ ಹಾಗೂ ಈ ಜಾಗಕ್ಕೆ ಅತ್ಯಂತ ಅವಶ್ಯವಿರುವ ಪಶು ಚಿಕಿತ್ಸಾಲಯವನ್ನು ಜರೂರು ಮಂಜೂರು ಮಾಡಲಾಗುವುದೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ನಿಜ.